# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ 34, ಗಂಗೇನಹಳ್ಳಿ, ಬೆಂಗಳೂರು.**

ಸಂಖ್ಯೆ:ಸ.ಅ/ವಾ-34/ಪಿ.ಆರ್./13/2020- 21 ದಿನಾಂಕ: 03.04.2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ: ಬಿ12(5)ಪಿ.ಆರ್./35/2021 ದಿನಾಂಕ 21/09/2020 ರವರ ಆದೇಶದಂತೆ ದಿನಾಂಕ: **03/04/2021 ರಂದು ಮಧ್ಯಾಹ್ನ 12.30 ಗಂಟೆಗೆ ವಾರ್ಡ್ ನಂ. 34,** ಸಮಿತಿ ಸಭೆಯನ್ನು ಗಂಗಾನಗರದ 108 ಬಸ್ ನಿಲ್ದಾಣದ ಹತ್ತಿರ ಆರೋಗ್ಯ ಕಛೇರಿಯಲ್ಲಿ ನಡೆದ ಸಮಿತಿ ಸಭೆಯ ನಡವಳಿಗಳು.

## ಸಭೆಗೆ ಹಾಜರಾಗಿದ್ದವರ ವಿವರಗಳು

| ಕ್ರ.ಸಂ. | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ ತಿಮ್ಮರಸ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ ರಾಮ್ ರಾವ್ | ಸಹಾಯಕ ಅಭಿಯಂತರರು ವಾರ್ಡ್ ನಂ. 34 |
| 3 | ಶ್ರೀ ಮಧು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 34 |
| 4 | ಶ್ರೀಮತಿ ಸುವರ್ಣ ದೇವಿ | ವರ್ಕ್ ಇನ್ಸ್ ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 5 | ಶ್ರೀ ಸೋಮೇಶ್ವರ್ | ಸೂಪರ್ ವೈಸರ್, ಬಿ.ಬಿ.ಎಂ.ಪಿ. |
| 6 | ಸೋಮಶೇಖರ್ ವಿ. | ಮಾರ್ಷಲ್ |
| 7 | ಶ್ರೀ ಕೃಷ್ಣ | ಬಿ.ಬಿ.ಎಂ.ಪಿ. |
| 8 | ವಲ್ಲಮ್ಮ | ಬಿ.ಬಿ.ಎಂ.ಪಿ. |
| 9 | ವೇದ್ ಕುಮಾರ್ ಬಿ. | ಸಾರ್ವಜನಿಕರು |
| 10 | ರಾಘವೇಂದ್ರ ರಾವ್ | ಸಾರ್ವಜನಿಕರು |
| 11 | ನಾಗವೇಣಿ | ಸಾರ್ವಜನಿಕರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ತಿಮ್ಮರಸ ಮತ್ತು ಕಾರ್ಯದರ್ಶಿ, ಸಹಾಯಕ ಅಭಿಯಂತರರಾದ ಶ್ರೀ. ರಾಮ್ ರಾವ್ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ. 34 ರವರು ಸ್ವಯಂ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್- 19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ಜನಿಕರಿಗೆ ತಿಳಿಯಪಡಿಸಿದರು.

- 5ನೇ ಮುಖ್ಯರಸ್ತೆಯಲ್ಲಿ ನೀರಿನ ಪೈಪ್ ಲೈನ್ ಮೇಲೆ ಬೋರ್ವೆಲ್ ಕೊರೆದಿರುವ ವಿಷಯದ ಕುರಿತು ಚರ್ಚಿಸಲಾಯಿತು.
- 5ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆಯಲ್ಲಿ ಬಹಳ ದಿನದಿಂದ ವಾಹನವನ್ನು ನೋ ಪಾರ್ಕಿಂಗ್ ಜಾಗದಲ್ಲಿ ಬಿಟ್ಟಿದ್ದಾರೆ. ಅದನ್ನು ತೆರವುಗೊಳಿಸುವ ಬಗ್ಗೆ ಚರ್ಚೆ ಮಾಡಲಾಯಿತು.
- 4ನೇ ಕ್ರಾಸ್ ಮುತ್ತಪ್ಪ ಬ್ಲಾಕ್ ನಲ್ಲಿ ಮನೆಯವರು ಕಾಂಪೌಂಡನ್ನು ರಸ್ತೆಯ ಮೇಲೆ ಕಟ್ಟುತ್ತಿರುವುದನ್ನು ತಡೆಯಬೇಕೆನ್ನುವ ಕುರಿತು ಚರ್ಚೆ ನಡೆಯಿತು.
- ಸಿ.ಪಿ.ಯು. ಬ್ಲಾಕ್ ನ 5ನೇ ಮುಖ್ಯರಸ್ತೆಯ 5ನೇ ಅಡ್ಡರಸ್ತೆಯಲ್ಲಿರುವ ಮ್ಯಾನ್ ಹೋಲ್ ಗಳನ್ನು ಕೆಳಗೆ ಇಳಿಸುವ ಕುರಿತು ಚರ್ಚಿಸಲಾಯಿತು.
- ವಾರ್ಡ್ ನಲ್ಲಿ 5 - 6 ಫ್ಲೋರ್ ಬಿಲ್ಡಿಂಗ್ ಕಟ್ಟುತ್ತಿದ್ದಾರೆ. ಇದು ಸರಿಯೇ? ಮತ್ತು ಬಿಲ್ಡಿಂಗ್ ಕಟ್ಟುವವರು ರಸ್ತೆಯ ಮೇಲೆ ಕಚ್ಚಾವಸ್ತುಗಳನ್ನು ಹರಡಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದಾರೆ ಎನ್ನುವ ವಿಷಯದ ಕುರಿತು ಚರ್ಚೆ ನಡೆಯಿತು.
- ಎಸ್.ಡಬ್ಲ್ಯೂ.ಎಂ. ನವರು ವಾರ್ಡ್ ಸ್ವಚ್ಛತೆಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎನ್ನುವುದರ ವಿಷಯದ ಕುರಿತು ಚರ್ಚಿಸಲಾಯಿತು.

**ಕಾರ್ಯದರ್ಶಿಗಳು**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ. 34**

**ಅಧ್ಯಕ್ಷರು**
**ಹಾಗೂ ನೋಡಲ್ ಅಧಿಕಾರಿಗಳು**
**ವಾರ್ಡ್ ನಂ. 34**

3/4

ಪ್ರತಿಯನ್ನು:

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ ಅಪರ ಆಯುಕ್ತರು (ಪೂರ್ವ) ಬಿಬಿಎಂಪಿರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ ಎಸ್ ಡಬ್ಲ್ಯೂ ಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ.ರವರ ಅವಗಾಹನೆಗೆ ಸಲ್ಲಿಸಿದೆ.
5. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳು ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್ ಬಿ ರವರ ಅವಗಾಹನೆಗೆ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ), ಬಿಬಿಎಂಪಿರವರು ಅವಗಾಹನೆಗೆ ಕಳುಹಿಸಿದೆ.
9. ಸಹಾಯಕ ಅಭಿಯಂತರರು (ವಿದ್ಯುತ್/ ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
10. ಕಛೇರಿ ಕಡತಕ್ಕೆ.